2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 12/2023**

ಹೆಸರುಃ ರತ್ನಮ್ಮ                                                                                    ಚಾಸಾಃ 1

ತಂದೆಯ ಹೆಸರುಃ ಚೆನ್ನಬಸಪ್ಪ                                                                      ಪ್ರಾಸಾ: 1

ವಯಸ್ಸುಃ  75  ವರ್ಷ

ಉದ್ಯೋಗಃ  ಗೃಹಿಣಿ

ವಾಸ ಸ್ಥಳಃ  ಸಂತೆಬೆನ್ನೂರು ಗ್ರಾಮ  ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 20-01-2025. ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-2 ಮತ್ತು 3 ನನ್ನ ಸೊಸೆ ಮತ್ತು ಮಗ. ಆರೋಪಿ ನನ್ನ ಹಿರಿಯ ಮಗ. ಆರೋಪಿ ಹಾಗೂ ನಮ್ಮ ನಡುವೆ ಯಾವುದೇ ಗಲಾಟೆ ನಡೆದಿರುವುದಿಲ್ಲ.  ಆರೋಪಿ ಜಮೀನು ಮತ್ತು ಮನೆಯ ವಿಚಾರವಾಗಿ ನನಗೆ ಅವಾಚ್ಯ ಶಬ್ದಗಳಿಂದ ಬೈಯ್ದಲ್ಲ ಯಾವುದೇ ಹಲ್ಲೆ ಮಾಡಿಲ್ಲ   ಚಾಸಾ-2 ರವರ ಮಾನಕ್ಕೆ ಕುಂದುಂಟುಮಾಡಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ, ಚಾಸಾ-3 ರವರು ಜಗಳ ಬಿಡಿಸಿದರು ಎಂದರೆ ಸರಿಯಲ್ಲ.

ನಮ್ಮ ಹಾಗೂ ಆರೋಪಿತರ ಮಧ್ಯೆ ಇದ್ದ ಜಮೀನು ಮತ್ತು ಮನೆಯ ಹಂಚಿಕೆ ವಿಚಾರವಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಕೆಲವು ದಾಖಲೆಗಳಿಗೆ  ನನ್ನ ಸಹಿಯನ್ನು ಪಡೆದಿರುತ್ತಾರೆ**.** ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ  ಹೇಳಿಕೆಯ ದೂರಾಗಿದ್ದು  ಅದನ್ನು ನಿಪಿ-1 ಎಂದು.  ಅದಲ್ಲಿನ  ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.  ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ  ಸಹಿ ಇದೆ. ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು. ಅದಲ್ಲಿನ  ಸಾಕ್ಷಿಯ ಸಹಿಯನ್ನು  ನಿಪಿ-2(ಎ) ಎಂದು ಗುರುತಿಸಲಾಯಿತು.    ನಿಪಿ.2 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.  ನಿಪಿ-2 ನ್ನು ಎಲ್ಲಿ,

ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಫೊಟೋದಲ್ಲಿ ನಾನು ಇದ್ದೆನೆ, ಸದರಿ ಫೊಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಫೊಟೋವನ್ನು ಎಲ್ಲಿ, ಯಾವಾಗ , ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಮಹಜರಿಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ಮತ್ತು ಮಹಜರನ್ನು ನೋಡಲಾಗಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ 11-07-2022 ರಂದು ರಾತ್ರಿ 8.30 ರ ಸಮಯದಲ್ಲಿ ನನ್ನ ವಾಸದ ಮನೆಯಲ್ಲಿ ಆರೋಪಿ ಜಮೀನು ಮತ್ತು ಮನೆಯವಿಚಾರವಾಗಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು ನಾನುತೊಟ್ಟಿದ್ದ ಬಟ್ಟೆಯನ್ನು ಹಿಡಿದು ಎಳೆದಾಡಿ ನನ್ನನ್ನು ನೂಕಿದರು ಎಂದರೆ ಸರಿಯಲ್ಲ. ಸದರಿ ಜಗಳ ಬಿಡಿಸಲು ಬಂದ ಚಾಸಾ-2 ರವರಿಗೆ ಅರೋಪಿ ಅವಾಚ್ಯ ಶಬ್ದಗಳಿಂದ ಬೈಯ್ದು ಅವರ ಕೂದಲನ್ನು ಹಿಡಿದು ಎಳೆದಾಡಿ ಮುಖಕ್ಕೆ , ಕುತ್ತಿಗೆಗೆ ಮತ್ತು ದೇಹಕ್ಕೆ ಗಾಯಪಡಿಸಿದರು ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ ಬಂದ ಚಾಸಾ-3 ರವರನ್ನು ಕುರಿತು ಆರೋಪಿ ನೀನು ಅಡಿಕೆಗಿಡದ ಜಮೀನಿಗೆ ಕಾಲಿಟ್ಟರೆ ಪ್ರಾಣ ತೆಗೆಯುವುದಾಗಿ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನನಗೆ ಮತ್ತು ಚಾಸಾ-2 ರವರ ಮಾನಕ್ಕೆ ಕುಂದುಟಾಗುವಂತೆ ವರ್ತಿಸಿದರು ಎಂದರೆ ಸರಿಯಲ್ಲ.

ಈ ಕುರಿತು ನಾನು ನಿಪಿ.1 ರಂತೆ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ದಾಖಲಿಸಿದನಿಪಿ-1ರ ಹಿನ್ನೆಲೆಯಲ್ಲಿ ದಿಃ 13-07-2022 ರಂದು ಚಾಸಾ-9 ರವರು ಚಾಸಾ-6 ಮತ್ತು 7 ರವರ ಸಮಕ್ಷಮ ನಿಪಿ-2 ರಂತೆ ಬೆಳಿಗ್ಗೆ 11.00 ರಿಂದ 11.30 ರವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ ನಿಪಿ-3 ರಂತೆ ಫೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ,

ನಾನು ಮತ್ತು ಆರೋಪಿ ರಾಜಿಯಾಗಿರುತ್ತೇವೆ ಎಂದರೆ ಸರಿ. ಆದ ಕಾರಣ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**